<u>ಪ್ರಥಮ ದರ್ಜೆಯ ನ್ಯಾಯಿಕ ದಂಡಾಧಿಕಾರಿಗಳವರ ನ್ಯಾಯಾಲಯ..... ಚಿತ್ತಾಪೂರ</u>

C.C No. 158/2017
CW-5 PW- 9

ಹೆಸರು : ಸಂಜು ಕುಮಾರ್

ತಂದೆಯ ಹೆಸರು: ಜಗನ್ನಾಥ್ ರಾಥೋಡ್

ವಯಸ್ಸು : 42 ವರ್ಷ

ಉದ್ಯೋಗ : ಕೂಲಿ

ವಾಸ ಸ್ಥಳ : ಸೂಗೂರು ಕೆ

---

<u>ಪ್ರಮಾಣವಚನ ಬೋಧಿಸಲಾಯಿತು. ದಿಃ 29-01-2026</u>

<u>ಮುಖ್ಯ ವಿಚಾರಣೆಃ ಮಾನ್ಯ ಸರ್ಕಾರಿ ಸಹಾಯಕ ಅಭಿಯೋಜಕರಿಂದ</u>

ನನಗೆ ಚಾಸಾ-4ರವರ ಪರಿಚಯ ಇದೆ. ಈಗ ಅವರು ತೀರಿಕೊಂಡಿರುತ್ತಾರೆ.

ದಿಃ 24.11.2016ರಂದು ಮಧ್ಯಾಹ್ನ 03.00 ಗಂಟೆಗೆ ನಾನು ಸುಗೂರ್ ನ ಹೋಟೆಲ್ ನಲ್ಲಿದ್ದಾಗ ಪೋಲೀಸರು ಕೆಲವು ದಾಖಲೆಗಳ ಮೇಲೆ ನನ್ನ ಸಹಿ ಪಡೆದಿರುತ್ತಾರೆ.

ಪೋಲೀಸರು ನನ್ನ ಸಮಕ್ಷಮ ಯಾವುದೇ ಜಪ್ತು ಪಂಚನಾಮೆಯನ್ನು ಮಾಡಿ ಯಾವುದೇ ದಾಖಲೆಗಳನ್ನು ಜಪ್ತುಪಡಿಸಿಕೊಂಡಿಲ್ಲ. ನಾನು ಪೋಲೀಸರು ಹೇಳಿದ ಮೇರೆಗೆ ಸಹಿ ಮಾಡಿರುತ್ತೇನೆ.

ಸಾಕ್ಷಿಗೆ ಈಗ ನಿಪಿ-4 ದಾಖಲೆಯನ್ನು ತೋರಿಸಲಾಗಿ ಸಾಕ್ಷಿ ಅದರಲ್ಲಿರುವ ತನ್ನ ಸಹಿಯನ್ನು ಗುರುತಿಸಿದ ಕಾರಣ ಸದರಿ ಸಹಿಯನ್ನು ನಿಪಿ-4ಬಿ ಎಂದು ಗುರುತಿಸಲಾಯಿತು.

(ಮಾನ್ಯ ಸ ಸ ಅ ರವರು ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಿ ಪಾಟೀ ಸವಾಲಿಗೆ ಅನುಮತಿ ಕೋರಿದ್ದು ದಾಖಲೆಗಳನ್ನು ಪರಿಶೀಲಿಸಿ ಸದರಿ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲಿಗೆ ಅನುಮತಿ ನೀಡಲಾಯಿತು.)

<u>ಪಾಟೀ ಸವಾಲುಃ ಸ.ಸ.ಅಭಿಯೋಜಕರವರಿಂದ</u>

ದಿಃ 24.11.2016 ರಂದು ಮಧ್ಯಾಹ್ನ 03.00-03.30 ಗಂಟೆ ಸಮಯದಲ್ಲಿ ನಿಮ್ಮ ಮತ್ತು ಚಾಸಾ-4 ರವರ ಸಮಕ್ಷಮ ಜಪ್ತು ಪಂಚನಾಮೆಯನ್ನು ಜರುಗಿಸಲಾಯಿತು ಎಂದರೆ ಸರಿಯಲ್ಲ. ಸದರಿ ಪಂಚನಾಮೆ ಸಮಯದಲ್ಲಿ ಚಾಸಾ- 11 ರವರು ದಾಖಲೆಗಳನ್ನು 3ನೇ ಆರೋಪಿತನಿಂದ ಜಪ್ತುಪಡಿಸಿಕೊಂಡರು ಎಂದರೆ ಸರಿಯಲ್ಲ. ನಿಮ್ಮ ಸಮಕ್ಷಮ ದಾಖಲೆಗಳನ್ನು ಜಪ್ತುಪಡಿಸಿಕೊಂಡರೂ ಸಹ ಈಗ ಆರೋಪಿತರೊಂದಿಗೆ ಸೇರಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೀರಿ ಎಂದರೆ ಸರಿಯಲ್ಲ.

<u>ಪಾಟೀ ಸವಾಲುಃ ಆರೋಪಿತರ ಪರ ಶ್ರೀ.ಸಿ.ಬಿ.ಎ. ವಕೀಲರಿಂದ - ಏನೂ ಇಲ್ಲ.</u>

ಮರು ವಿಚಾರಣೆ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಲಾಯಿತು )

ಓ. ಹೇ ಕೇ.ಸರಿ ಇದೆ.

ಸಿವಿಲ್ & J.M.F.C ನ್ಯಾಯಾಧೀಶರು,

ಚಿತ್ತಾಪೂರ.

ಪ್ರಥಮ ದರ್ಜೆಯ ನ್ಯಾಯಿಕ ದಂಡಾಧಿಕಾರಿಗಳವರ ನ್ಯಾಯಾಲಯ..... ಚಿತ್ತಾಪೂರ

C.C No. 158/2017
CW-11 PW- 8

ಹೆಸರು : ಚಂದ್ರಕಾಂತ್

ತಂದೆಯ ಹೆಸರು: ಅಂಬಾರಾಯ್ ಮಕಾಳೆ

ವಯಸ್ಸು : 56 ವರ್ಷ

ಉದ್ಯೋಗ : ಪಿ.ಎಸ್.ಐ. ಶಹಬಾದ್

ವಾಸ ಸ್ಥಳ : ಶಹಬಾದ್

---

ಪ್ರಮಾಣವಚನ ಬೋಧಿಸಲಾಯಿತು. ದಿಃ 29-01-2026

ಮುಖ್ಯ ವಿಚಾರಣೆಃ ಮಾನ್ಯ ಸರ್ಕಾರಿ ಸಹಾಯಕ ಅಭಿಯೋಜಕರಿಂದ

ನಾನು 2016 ರಿಂದ 2018 ರವರೆಗೆ ಕಾಳಗಿ ಪೋಲೀಸ್ ಠಾಣೆಯಲ್ಲಿ ಪಿ.ಎಸ್.ಐ. ಆಗಿ ಕರ್ತವ್ಯ ನಿರ್ವಹಿಸಿರುತ್ತೇನೆ.

ನಾನು ಚಾಸಾ-10ರವರಿಂದ ಕಡತವನ್ನು ಸ್ವೀಕರಿಸಿ ಮುಂದಿನ ತನಿಖೆಯನ್ನು ಮಾಡಿರುತ್ತೇನೆ.

ದಿಃ 24.11.2016ರಂದು ಗುನ್ಹಾ ಸ್ಥಳದ ಪಂಚನಾಮೆಯನ್ನು ಚಾಸಾ- 2 ಮತ್ತು 3ರವರ ಸಮಕ್ಷಮ ಮಧ್ಯಾಹ್ನ 12.30 ರಿಂದ 01.30 ರವರೆಗೆ ಜರುಗಿಸಿರುತ್ತೇನೆ.

ಅದೇ ದಿನ ಮಧ್ಯಾಹ್ನ 03.00 ರಿಂದ 03.30 ಗಂಟೆ ಸಮಯದಲ್ಲಿ 3ನೇ ಆರೋಪಿಯಿಂದ ಚಾಸಾ- 4 ಮತ್ತು 5 ರವರ ಸಮಕ್ಷಮ ದಾಖಲಾತಿಗಳನ್ನು ಪಡೆದು ಪಂಚನಾಮೆಯನ್ನು ಜರುಗಿಸಿರುತ್ತೇನೆ.

ಅದೇ ದಿನ ಚಾಸಾ-6 ರಿಂದ 9 ರವರ ಹೇಳಿಕೆಯನ್ನು ಪಡೆದಿರುತ್ತೇನೆ.

ಅದೇ ದಿನ 1, 2, 4 ರಿಂದ 6ನೇ ಆರೋಪಿತರನ್ನು ದಸ್ತಗಿರಿ ನಿಯಮ ಪಾಲಿಸಿ ವಶಕ್ಕೆ ಪಡೆದು ಮಾನ್ಯ ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತೇನೆ.

ದಿಃ 16.12.2016ರಂದು 3 ಮತ್ತು 7ನೇ ಆರೋಪಿತರು ಮಾನ್ಯ ನ್ಯಾಯಾಲಯದಿಂದ ನಿರೀಕ್ಷಣಾ ಜಾಮೀನು ಪಡೆದು ಠಾಣೆಗೆ ಹಾಜರಾಗಿದ್ದು ಅವರಿಗೆ ದಸ್ತಗಿರಿ ನಿಯಮ ಪಾಲಿಸಿ ಜಾಮೀನಿನ ಮೇಲೆ ಬಿಡುಗಡೆ ಮಾಡಿರುತ್ತೇನೆ. ಅದೇ ದಿನ ಆರೋಪಿತರ ವಿರುದ್ಧ ಸಾಕಷ್ಟು ಸಾಕ್ಷ್ಯಾಧಾರಗಳು ಸಿಕ್ಕ ಕಾರಣ ಅಂತಿಮ ವರದಿಯನ್ನು ಸಲ್ಲಿಸಿರುತ್ತೇನೆ.

ನಾನು ಜರುಗಿಸಿದ ಸ್ಥಳ ಪಂಚನಾಮೆಯನ್ನು ನೋಡಿದರೆ ಗುರುತಿಸುತ್ತೇನೆ.ಅದು ಈಗಾಗಲೇ ನಿಪಿ-2 ಎಂದು ಗುರುತಿಸಲಾಗಿದ್ದು ಅದಲ್ಲಿರುವ ಸಾಕ್ಷಿಯ ಸಹಿಯನ್ನು ನಿಪಿ-2ಬಿ ಎಂದು ಗುರುತಿಸಲಾಯಿತು. ನಾನು ಜರುಗಿಸಿದ ಜಪ್ತು ಪಂಚನಾಮೆಯನ್ನು ನೋಡಿದರೆ ಗುರುತಿಸುತ್ತೇನೆ. ಸಾಕ್ಷಿ ಗುರುತಿಸಿದ ಜಪ್ತು ಪಂಚನಾಮೆಯನ್ನು ನಿಪಿ-4 ಎಂದು ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿಪಿ-4ಎ ಎಂದು ಗುರುತಿಸಲಾಯಿತು. ಈ ಪ್ರಕರಣದ ಆರೋಪಿಗಳನ್ನು ನೋಡಿದರೆ ಗುರುತಿಸುತ್ತೇನೆ. 2 ರಿಂದ 4, 6 ಮತ್ತು 7ನೇ ಆರೋಪಿತರು ಹಾಜರಿದ್ದು ಅವರನ್ನು ಸಾಕ್ಷಿ ನೋಡಿ ಗುರುತಿಸಿದ್ದು 5ನೇ ಆರೋಪಿತ ಇಂದು ಗೈರು ಹಾಜರಿದ್ದು ಗುರುತಿಸುವಿಕೆಗೆ ತಕರಾರು ಇಲ್ಲ ಎಂದು ವಿನಾಯಿತಿ ಅರ್ಜಿ ಸಲ್ಲಿಸಲಾಗಿದೆ.

<u>ಪಾಟೀ ಸವಾಲುಃ ಆರೋಪಿತರ ಪರ ಶ್ರೀ.ಸಿ.ಬಿ.ಎ. ವಕೀಲರಿಂದ -</u>

ನನ್ನ ಪ್ರಕಾರ ಗುನ್ಹಾ ಸ್ಥಳವು ನಮ್ಮ ಠಾಣೆಯಿಂದ 2-3 ಕಿಮೀ ದೂರದಲ್ಲಿದೆ. ಗುನ್ಹಾ ಸ್ಥಳಕ್ಕೆ ಯಾವುದೇ ವಾಹನ ಹೋಗುವುದಿಲ್ಲ ಎಂದರೆ ಸರಿ. ಗುನ್ಹಾ ಸ್ಥಳವನ್ನು ನನಗೆ ಚಾಸಾ-1ರವರು ತೋರಿಸಿರುತ್ತಾರೆ. ನೀವು ಪಂಚನಾಮೆ ಮಾಡುವ ಸಮಯದಲ್ಲಿ ಅಲ್ಲಿ ಜನ ಸೇರಿದ್ದರಾ ಎಂದರೆ ಸಾಕ್ಷಿ ಸೇರಿದ್ದರು ಎಂದು ನುಡಿಯುತ್ತಾರೆ. ನೀವು ಯಾವುದೇ ಗುನ್ಹಾ ಸ್ಥಳಕ್ಕೆ ಹೋಗಿಲ್ಲ ಮತ್ತು ನೀವು ಯಾವುದೇ ಪಂಚನಾಮೆಯನ್ನು ಜರುಗಿಸಿಲ್ಲ ಎಂದರೆ ಸರಿಯಲ್ಲ. ಗುನ್ಹಾ ಸ್ಥಳದ ಹೊಲದಲ್ಲಿ ಮತ್ತು ಅಕ್ಕಪಕ್ಕದ ಹೊಲಗಳಲ್ಲಿ ಯಾವ ಬೆಳೆ ಬೆಳೆಯಲಾಗಿತ್ತು ಎಂದು ನನಗೀಗ ಹೇಳಲು ಬರುವುದಿಲ್ಲ.

ಗುನ್ಹಾ ಸ್ಥಳದ ಚಕ್ ಬಂದಿ ಹೇಳಬಲ್ಲೆ. ನಾನು ಅದರ ಬಗ್ಗೆ ಪಂಚನಾಮೆಯಲ್ಲಿ ನಮೂದು ಮಾಡಿರುತ್ತೇನೆ.

ನಾನು ಜಪ್ತುಪಡಿಸಿಕೊಂಡ ದಾಖಲೆಗಳು 3ನೇ ಆರೋಪಿತನ ಬಳಿ ಇದ್ದವು. 3ನೇ ಆರೋಪಿತನ ಬಳಿ ದಾಖಲೆಗಳು ಹೇಗೆ ಬಂದಿದ್ದವು ಎಂದು ಮತ್ತು ಎಂದು ಬಂದಿದ್ದವು ಎಂದು ನಾನು ತನಿಖೆ ಮಾಡಿಲ್ಲ. ನೀವು ಯಾವುದೇ ದಾಖಲೆಗಳನ್ನು ಪಂಚರ ಸಮಕ್ಷಮ ವಶಪಡಿಸಿಕೊಂಡಿಲ್ಲ ಎಂದರೆ ಸರಿಯಲ್ಲ. ನೀವು ಯಾವುದೇ ಸಾಕ್ಷಿದಾರರ ಹೇಳಿಕೆಗಳನ್ನು ಪಡೆದಿಲ್ಲ ಎಂದರೆ ಸರಿಯಲ್ಲ. ನೀವು ಯಾಂತ್ರಿಕವಾಗಿ ತನಿಖೆ ಮಾಡಿ ಆರೋಪಿತರ ವಿರುದ್ಧ ಯಾವುದೇ ಸಾಕ್ಷ್ಯಾ ಧಾರಗಳು ಇಲ್ಲದಿದ್ದರೂ ಸಹ ತಪ್ಪಾಗಿ ಅಂತಿಮ ವರದಿ ಸಲ್ಲಿಸಿದ್ದೀರಿ ಎಂದರೆ ಸರಿಯಲ್ಲ. ಆರೋಪಿತರು ಯಾವುದೇ ಗುನ್ಹೆ ಮಾಡಿಲ್ಲ ಎಂದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಲಾಯಿತು )

ಓ. ಹೇ ಕೇ.ಸರಿ ಇದೆ.

ಸಿವಿಲ್ & J.M.F.C ನ್ಯಾಯಾಧೀಶರು,
ಚಿತ್ತಾಪೂರ.